ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಮ್

ಭಗವದ್ಧ್ಯಾನಪ್ರಕರಣಮ್



ಶ್ರೀಸುಯಮೀರಾಘವೇಂದ್ರ
ಪ್ರಕಾಶನ ಸಂಖ್ಯೆ - 30

ಶ್ರೀಸುಶೀಲೇಂದ್ರವಿಜಯಮಾಲಾ
ಸಂಖ್ಯೆ - 20

ಕಮಲೇಶ ಕುಸುಮ - 10

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಮ್

ಭಗವದ್ಧ್ಯಾನಪ್ರಕರಣಮ್

ಅನುವಾದಕರು :

ವಿದ್ವಾನ್ ಹಯವದನ ಪುರಾಣಿಕರು
ಶ್ರೀ ಗುರುಸಾರ್ವಭೌಮ ಸಂಸ್ಕೃತ ವಿದ್ಯಾಪೀಠ
ಮಂತ್ರಾಲಯ

ಪ್ರಕಾಶಕರು :

ಶ್ರೀಸುಯಮೀರಾಘವೇಂದ್ರ ಸಂಶೋಧನ ಕೇಂದ್ರ
ನಂಜನಗೂಡು - ಬೆಂಗಳೂರು

2010

Rarest Archiver

|| ಶ್ರೀಮೂಲರಾಮೋ ವಿಜಯತೇ || || ಶ್ರೀಗುರುರಾಜೋ ವಿಜಯತೇ ||

ಶ್ರೀಹಂಸನಾಮಕ ಪರಮಾತ್ಮಪ್ರವರ್ತಿತ ಜ್ಞಾನಪೀಠಾಧ್ಯಕ್ಷರಾದ
ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲಮಹಾಸಂಸ್ಥಾನಾಧೀಶ್ವರರಾದ
ಶ್ರೀರಾಘವೇಂದ್ರಸ್ವಾಮಿಗಳವರ ಮಠದ ದಿಗ್ವಿಜಯವಿದ್ಯಾಸಿಂಹಾಸನಾಧೀಶ್ವರರಾದ
ಪರಮಪೂಜ್ಯ ಶ್ರೀ 108 ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರ
ಕರಕಮಲಸಂಜಾತರಾದ
ಪರಮಪೂಜ್ಯ ಶ್ರೀ 108 ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರ
ವರಕುಮಾರಕರಾದ

ಪರಮಪೂಜ್ಯ ಶ್ರೀ 108 ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರ

75 ನೇ ವರ್ಷದ ವರ್ಧಂತ್ಯುತ್ಸವದ ಸವಿನೆನಪಿಗಾಗಿ ಪ್ರಕಾಶಿಸಲ್ಪಟ್ಟ

ಶ್ರೀಗುರುರಾಜರ ಗ್ರಂಥರತ್ನ

|| ಜೀಯಾತ್ ಶ್ರೀಸುಯತೀಂದ್ರತೀರ್ಥಸಂಯಮಿಮಣೀ ವೇದಾಂತರಾಜ್ಯೇ ಚಿರಮ್ ||

Rarest Archiver

|| ಶ್ರೀಃ ||

|| ಶ್ರೀಮೂಲರಾಮೋ ವಿಜಯತೇತರಾಮ್ ||

|| ಶ್ರೀಗುರುರಾಜೋ ವಿಜಯತೇ ||

ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮವಿರಚಿತಮ್

ಭಗವದ್ಧ್ಯಾನಪ್ರಕರಣಮ್

ಕನ್ನಡಾನುವಾದ :

ವಿದ್ವಾನ್ ಹಯವದನ ಪುರಾಣಿಕರು

ಶ್ರೀಗುರುಭ್ಯೋ ನಮಃ ||

ರೇಚಕಪೂರಕಕುಂಭಕಕ್ರಮೇಣ ವಾಯುಧಾರಣಾನಂತರಂ, ಧ್ಯಾನಂ ಕುರ್ಯಾತ್ । ಹೃದಯೇ ಅಧೋಮುಖಂ ಹೃತ್ಕಮಲಂ ಅಷ್ಟಪತ್ರಂ ಪ್ರಣವೇನೋರ್ಧ್ವಮುಖಂ ಕೃತ್ವಾ ತೇನೈವ ವಿಕಾಸ್ಯ ತತ್ಕರ್ಣಿಕಾಯಾಂ ಸೂರ್ಯಮಂಡಲಂ ತದುಪರಿ ಚಂದ್ರಮಂಡಲಂ ತದುಪರಿ ಅಗ್ನಿಮಂಡಲಂ ಧ್ಯಾತ್ವಾ ತಜ್ಜ್ವಾಲಾಯಾಂ ರಮಾರೂಪದಿವ್ಯರತ್ನಮಂಟಪಮಧ್ಯೇ ದಿವ್ಯರತ್ನಖಚಿತ ಸುವರ್ಣಮಯ-ಪೀಠಂ ಧ್ಯಾತ್ವಾ ತತ್ರ ಪೀಠದೇವತಾಃ ಪರದೇವತಾದ್ಯಾಃ ಆವಾಹ್ಯ, ಪೀಠೋಪರಿ ಷಟ್ಕೋಣಪದ್ಮ-ಭೂಮಿಂ ಧ್ಯಾತ್ವಾ, ಕೋಣೇಷು ದೇವಸ್ಯಾಗ್ರೇ ಅಗ್ನಿಂ, ದಕ್ಷಿಣೇ ಸೂರ್ಯಂ, ಸವ್ಯೇ ಚಂದ್ರಮಸಂ, ದೇವಸ್ಯ ಪೃಷ್ಠೇ ಸವ್ಯೇ ಶ್ರಿಯಂ, ದಕ್ಷಿಣೇ ಭುವಂ, ಮಧ್ಯಭಾಗೇ ದುರ್ಗಾಂ ಧ್ಯಾತ್ವಾ ತತ್ರ ಷಟ್ಕೋಣ-ಭೂಮೌ ಅಷ್ಟದಳಪದ್ಮರಮಾರೂಪಂ ಧ್ಯಾತ್ವಾ ತತ್ರ ಪದ್ಮದಳೇ ಸೂರ್ಯಂ, ಕೇಸರೇಷು ಸೋಮಂ, ಕರ್ಣಿಕಾಯಾಂ ಹುತಾಶನಂ ಧ್ವಾತ್ವಾ ಪ್ರತ್ಯೇಕಂ ಪದ್ಮಾಷ್ಟದಳೇಷು ಮಧ್ಯೇ ಕರ್ಣಿಕಾಯಾಂ ಚ । ''ವಿಮಲೋತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ತಥೈವ ಚ । ಪ್ರಹ್ವೀ ಸತ್ಯಾ ತಥೇಶಾನಾಽನುಗ್ರಹಾ-ಶ್ಚೇತಿ ಶಕ್ತಯಃ ।'' ಇತಿ ಪರಮಾತ್ಮ ಮೂರ್ತೀಃ ಧ್ಯಾತ್ವಾ ಕರ್ಣಿಕೋಪರಿ ತಮಃ ರಜಸ್ಸತ್ವಮಿತಿ ಕ್ರಮೇಣ ತ್ರಿಗುಣಾಭಿಮಾನಿನೀಂ ಲಕ್ಷ್ಮೀ ತಲ್ಪಾಕಾರಂ ಛತ್ರಾಕಾರಫಣಂ ಶೇಷಂ ಧ್ಯಾತ್ವಾ ತದುಪರಿ ಗುಣತ್ರಯಾ-ಭಿಮಾನಿನೀಂ ಚಿತ್ರಾಸನರೂಪಂ ಲಕ್ಷ್ಮೀಂ ಧ್ಯಾತ್ವಾ ತತ್ರಸ್ವರೂಪಹೃದಯೇ ಸ್ವರೂಪಾಂಗುಷ್ಠ ಪರಿಮಿತಂ ಬಾಹ್ಯಹೃದಯೇ ಬಾಹ್ಯಾಂಗುಷ್ಠಪರಿಮಿತಂ ತತ್ಪೃಷ್ಠಭಾಗೇ ಹೃತ್ಕಮಲವ್ಯಾಪಿನಂ ಪ್ರಾದೇಶಪರಿಮಿತಂ ತದಧಃ ಕರ್ಣಿಕಾಮೂಲೇ ಅಂಗುಷ್ಠಾಗ್ರಪ್ರಮಾಣಂ ಚ ಪರಮಾತ್ಮಾನಂ ''ನಾರಾಯಣ ಮನಾಮಯಂ''

Rarest Archive

ಇತ್ಯಾದ್ಯುಕ್ತಪ್ರಕಾರೇಣ ಲಕ್ಷ್ಮೀಧರಾಭ್ಯಾಮಿತ್ಯಾದಿ ತಂತ್ರಸಾರೋಕ್ತಾವರಣದೇವತಾಸಹಿತಂ ಉದ್ಯದಾ-ದಿತ್ಯವರ್ಣಂ ಮೇಘಶ್ಯಾಮಂ ವಾ ಧ್ಯಾಯೇತ್ । ತದುಕ್ತಮ್ ॥

ಏಕಾಂತೇ ತು ಶುಚೌ ದೇಶೇ ಜನಸಮ್ಮರ್ದವರ್ಜಿತೇ ।
ಕುಶಾಜಿನಾದ್ಯಾಸನಗಃ ಸ್ವಸ್ಥಚಿತ್ತಃ ಸ್ಥಿರಃ ಶುಚಿಃ ॥
ಸಮಂ ಕಾಯಶಿರೋಗ್ರೀವಂ ಧಾರಯನ್ನಚಲಂ ಸ್ಥಿರಃ ॥ 1 ॥

ಸಂಪ್ರೇಕ್ಷ್ಯ ನಾಸಿಕಾಽಗ್ರಂ ಸ್ವಂ ದಿಶಶ್ಚಾನವಲೋಕಯನ್ ।
ಅಷ್ಟಪತ್ರ ಹೃದಯಪದ್ಮಮಧ್ಯೇ ಸೂರ್ಯೇಂದುವಹ್ನಿಗಮ್ ॥ 2 ॥

ಪೀಠತನ್ಮಧ್ಯಮಧ್ಯಸ್ಥಂ ನಾರಾಯಣಮನಾಮಯಮ್ ।
ಉದ್ಯದಾದಿತ್ಯಸಂಕಾಶಂ ತೇಜಸಾನುಪಮಂ ಸದಾ ॥ 3 ॥

ಸಹಸ್ರಾಮಿತಸೂರ್ಯಾಣಾಂ ಸರ್ವದಾಽಽನಂದರೂಪಿಣಮ್ ।
ಅತಿರಕ್ತತಲಂ ಭಾಸ್ವನ್ನಖವ್ರಾತವಿಭೂಷಿತಮ್ ॥ 4 ॥

ವೃತ್ತಜಂಘಂ ವೃತ್ತಜಾನುಂ ಹಸ್ತಿಹಸ್ತೋರುಮೀಶ್ವರಮ್ ।
ಮಹಾಕಟಿತಟಾನದ್ಧಕಾಂಚೀಪೀತಾಂಬರೋಜ್ಜ್ವಲಮ್ ॥ 5 ॥

ನಿಮ್ನನಾಭಿಂ ಚ ತ್ರಿವಳಿಂ ಸುವೃತ್ತೋದರಬಂಧುರಮ್ ।
ವಿಸ್ತಾರವಕ್ಷಸಂ ಭ್ರಾಜತ್ಕೌಸ್ತುಭಾಮುಕ್ತಕಂಧರಮ್ ॥ 6 ॥

ವನಮಾಲಾಧರಂ ಹಾರವೈಜಯಂತ್ಯಾದಿಭಿರ್ಯುತಮ್ ।
ಪೃಥುದೀರ್ಘಚತುರ್ಬಾಹುಂ ಶಂಖಚಕ್ರಗದಾಂಬುಜಮ್ ॥ 7 ॥

ರಕ್ತಮುನ್ನಿದ್ರಪದ್ಮಾಕ್ಷಂ ಸ್ಫುರನ್ ಮಕರಕುಂಡಲಮ್ ।
ಪೂರ್ಣಚಂದ್ರಾಯುತೋದ್ರಿಕ್ತಕಾಂತಿಸನ್ಮುಖಪಂಕಜಮ್ ॥ 8 ॥

ಸುಭ್ರುವಂ ಸುಲಲಾಟಾಂತ ಕಿರೀಟಾಬದ್ಧಮೂರ್ಧಜಮ್ ।
ನಿಶ್ಶೇಷದುಃಖಶಮನಂ ನಿತ್ಯಾನಂದಂ ಶುಚಿಸ್ಮಿತಮ್ ॥ 9 ॥

ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ ಸ್ವಮೂರ್ತಿಗಣಮಧ್ಯಗಃ ।

ಬ್ರಹ್ಮವಾಯುಶಿವಾಹೀಶವಿಪ್ಯೈಃ ಶಕ್ರಾದಿಕೈರಪಿ ।
ಸೇವ್ಯಮಾನೋಽಧಿಕಂ ಭಕ್ತ್ಯಾ ನಿತ್ಯನಿಶ್ಶೇಷಶಕ್ತಿಮಾನ್ ॥ 10 ॥

Rarest Archiver

ತ್ವಕ್ಕೇಶಾಂಗುಲಿ ದಂತಾಂಗುಲಿಪರ್ವಸು ಪಂಚ ಸೌಕ್ಷ್ಮ್ಯಾಣಿ ।

ಅಥ ದ್ವಾತ್ರಿಂಶಲ್ಲಕ್ಷಣಾನಿ ಧ್ಯೇಯಾನಿ

ಭುಜ ನೇತ್ರ ಹನು ಜಾನು ಸ್ಥಾನೇಷು ಪಂಚ ದೈರ್ಘ್ಯಾಣಿ । ಪಾಣಿ ಪಾದ ನೇತ್ರಾಂತ ತಾಲು ಸ್ಥಾನೇಷು ಜಿಹ್ವಾಯಾಮಧರೋಷ್ಠೇ ನಖೇಷು ಸಪ್ತಸ್ಥಾನೇಷು ರಕ್ತಾನಿ । ವಕ್ಷಃ ಕುಕ್ಷ್ಯಲಶ ವಕ್ತ್ರ ಸ್ಕಂಧಲಲಾಟೇಷು ಔನ್ನತ್ಯಮ್ । ಲಲಾಟ ಕಟಿ ವಕ್ಷಸ್ಸು ಪೃಥುತ್ವಮ್ । ಗ್ರೀವಾ ಮೇಹನಜಂಘಾಸು ಲಘುತ್ವಮ್ । ಸ್ವರಸತ್ವನಾನಾಭಿಷು ತ್ರಿಷು ಸ್ಥಾನೇಷು ಗಂಭೀರತ್ವಂ ಚಿಂತಯೇತ್ ।

ತದುಕ್ತಮ್-

ಪಂಚದೀರ್ಘಃ ಪಂಚಸೂಕ್ಷ್ಮಃ ಸಪ್ತರಕ್ತಃ ಷಡುನ್ನತಃ ।
ತ್ರಿಪೃಥುಲಘುಗಂಭೀರೋ ದ್ವಾತ್ರಿಂಶಲ್ಲಕ್ಷಣಾನಿ ತು ॥

ಅತ್ರ ಲಘುಶಬ್ದೋ ಹ್ರಸ್ವಾರ್ಥೋ ಜ್ಞೇಯಃ । ತಥಾ ದಕ್ಷಿಣೇ ಕರೇ ಸಹಸ್ರಾರಂ ಚಕ್ರಂ ಅಷ್ಟಾಸ್ರಾ ಗದಾ ಶತಾವರ್ತಶಂಖಂ ಚ ಲಕ್ಷಣಂ ಜ್ಞೇಯಮ್ । ವಾಮಕರೇ ಸಹಸ್ರದಳಂ ಪದ್ಮಂ ಚ ಲಕ್ಷಣತ್ವೇನ ಜ್ಞೇಯಮ್ । ಪಾದತಲಯೋಃ ವಜ್ರಾಕುಂಶಧ್ವಜಪದ್ಮರೇಖಾಃ ಧ್ಯೇಯಾಃ ।

ಹೃದಯೇ ಧ್ಯೇಯಮೂರ್ತಯಸ್ತಿಸ್ರಃ -

ಸರ್ವೇಶೋ ಹೃದಯೇ ವ್ಯಾಪ್ತಃ ಪ್ರಾದೇಶಃ ಪುರುಷೋತ್ತಮಃ ।
ಜೀವಾನಾಂ ಸ್ಥಾನಮುದ್ದಿಷ್ಟಃ ಸರ್ವದೇವಃ ಸನಾತನಃ ॥
ಹೃತ್ಕರ್ಣಿಕಾಮೂಲಗತಃ ಸ್ವಾಂಗುಷ್ಠಾಗ್ರಪ್ರಮಾಣಕಃ ।
ಮೂಲೇಶ ಇತಿ ನಾಮಾಸ್ಮಿನ್ ಸರ್ವೇ ಜೀವಾಃ ಪ್ರತಿಷ್ಠಿತಾಃ ॥
ಅಂಗುಷ್ಠಮಾತ್ರಪುರುಷೇ ಕರ್ಣಿಕಾಗ್ರಸ್ಥಿತೇ ಹರೌ ॥
ಪ್ರವಿಶಂತಿ ಸುಷುಪ್ತೌತು ಪ್ರಬುಧ್ಯಂತೇ ತತಸ್ತಥಾ ।
ಸೋಽಯಂ ತ್ರಿರೂಪೋ ಭಗವಾನ್ ಹೃದಯಾಖ್ಯಃ ಪ್ರಕೀರ್ತಿತಃ ॥

ಯಾವತ್ಕಾಲಂ ಧ್ಯಾನವಶಾತ್ ಹೃದಯೇ ವಾಸನಾಮಯಮೂರ್ತಿಃ ಪ್ರತೀಯತೇ ತಾವತ್ಕಾಲಂ ಧ್ಯಾನಾಭ್ಯಾಸಂ ಕುರ್ಯಾತ್ । ವಾಸನಾಮಯಪ್ರತೀತ್ಯನಂತರಂ ತಸ್ಯಾಂ ಪ್ರತಿಮಾಯಾಂ ವಾಸನಾಮಯ್ಯಾಂ ಅನವದ್ಯೋದಕಸ್ನಾನಗಂಧಪುಷ್ಪಾದಿಭಿಃ ಮನಸಾ ಸಂಕಲ್ಪಿತಾಂ ಪೂಜಾಂ ಕೃತ್ವಾ ತತ್ಪ್ರತಿಮಾಂತರ್ಗತವಿಷ್ಣೌ ಪೂರ್ಣನಿರ್ದೋಷಃ ಪೂರ್ಣಜ್ಞಾನಾತ್ಮಕಃ ಪೂರ್ಣಾನಂದಾತ್ಮಕಃ ಪೂರ್ಣಸ್ವಾಮೀ ಪೂರ್ಣಗುಣ ಇತಿ ಧ್ಯಾನಂ ಕುರ್ಯಾತ್ ।

Rarest Archiver

ಇದಂ ಚ ಧ್ಯಾನಂ ಯಾವತ್ ಸ್ವರೂಪಜ್ಞಗುರುದರ್ಶನಂ ತಾವತ್ ಕುರ್ಯಾತ್ । ಪಶ್ಚಾತ್ ತಾದೃಶಗುರೂಕ್ತಪ್ರಕಾರೇಣ ಯಾವದಪರೋಕ್ಷಂ ಧ್ಯಾನಂ ಕುರ್ಯಾತ್ ॥

ಧ್ಯಾನಸಮಾಪ್ತ್ಯನಂತರಂ ಸಂಪುಟಾಕಾರೇಣ ಮಾತೃಕಾನ್ಯಾಸತತ್ತ್ವನ್ಯಾಸೌ ಕೃತ್ವಾ ಧ್ಯಾನಂ ಹರೌ ಸಮರ್ಪಯೇತ್ ॥

॥ ಇತಿ ಶ್ರೀರಾಘವೇಂದ್ರತೀರ್ಥಕೃತ ಭಗವದ್ಧ್ಯಾನಪ್ರಕರಣಂ ಸಂಪೂರ್ಣಮ್ ॥

॥ ಶ್ರೀಕೃಷ್ಣಾರ್ಪಣಮಸ್ತು ॥

★ ★ ★

Rarest Archiver

ಭಗವದ್ಧ್ಯಾನ ಪ್ರಕರಣ

ರೇಚಕ ಪೂರಕ ಕುಂಭಕ ಕ್ರಮದಿಂದ ವಾಯುಧಾರಣ ಮಾಡಿದ ಬಳಿಕ ಧ್ಯಾನಮಾಡಬೇಕು. ಹೃದಯದಲ್ಲಿ ಅಧೋಮುಖವಾಗಿರುವ ಅಷ್ಟಪತ್ರ ಹೃತ್ಕಮಲವನ್ನು ಪ್ರಣವದಿಂದ ಮೇಲ್ಮುಖವಾಗಿ ಮಾಡಿ ಪ್ರಣವದಿಂದಲೇ ಅದನ್ನು ಅರಳಿಸಿ ಅದರ ಕರ್ಣಿಕೆಯಲ್ಲಿ ಸೂರ್ಯಮಂಡಲ, ಅದರ ಮೇಲ್ಭಾಗದಲ್ಲಿ ಅಗ್ನಿ ಮಂಡಲಗಳನ್ನು ಧ್ಯಾನಿಸಿ ಅಗ್ನಿ ಜ್ವಾಲೆಯಲ್ಲಿ ರಮಾರೂಪವಾದ ದಿವ್ಯರತ್ನಮಂಟಪಮಧ್ಯದಲ್ಲಿ ದಿವ್ಯ ರತ್ನಖಚಿತ ಸುವರ್ಣಮಯ ಪೀಠವನ್ನು ಚಿಂತಿಸಬೇಕು. ಅದರಲ್ಲಿ ಪರದೇವತಾದಿ ಪೀಠ ದೇವತೆಗಳನ್ನು ಆವಾಹಿಸಬೇಕು. ಪೀಠದ ಮೇಲೆ ಷಡ್‌ದಳಪದ್ಮ ಅದರ ದಳಗಳಲ್ಲಿ ದೇವನ ಮುಂಭಾಗದಲ್ಲಿ ಅಗ್ನಿ, ಬಲ ಭಾಗದಲ್ಲಿ ಸೂರ್ಯ ಎಡಭಾಗದಲ್ಲಿ ಚಂದ್ರ, ದೇವನ ಹಿಂದುಗಡೆ ಎಡದಲ್ಲಿ ಶ್ರೀದೇವಿ ಬಲದಲ್ಲಿ ಭೂದೇವಿ ನಡುವೆ ದುರ್ಗಾದೇವಿ ಹೀಗೆ ಧ್ಯಾನಿಸಬೇಕು ಷಡ್‌ದಳ ಪದ್ಮದ ಮೇಲೆ ಅಷ್ಟದಳ ರಮಾರೂಪ ಪದ್ಮ ಅದರ ದಳಗಳಲ್ಲಿ ಸೂರ್ಯ, ಕೇಸರಗಳಲ್ಲಿ ಚಂದ್ರ, ಕರ್ಣಿಕೆಯಲ್ಲಿ ಅಗ್ನಿ, ಪದ್ಮದ ಅಷ್ಟದಳಗಳಲ್ಲಿ ಪ್ರತ್ಯೇಕವಾಗಿ ಎಂಟು ಮತ್ತು ಮಧ್ಯದಕರ್ಣಿಕಾದಲ್ಲಿ ಒಂದು ಹೀಗೆ ಒಂಬತ್ತು ಸ್ಥಳಗಳಲ್ಲಿ ವಿಮಲಾ ಉತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ಪ್ರಹ್ವೀ ಸತ್ಯಾ ಈಶಾನಾ ಅನುಗ್ರಹಾ ಎಂಬ ಒಂಬತ್ತು ಪರಮಾತ್ಮನ ಮೂರ್ತಿಗಳನ್ನು ಧ್ಯಾನಿಸಬೇಕು. ಕರ್ಣಿಕೆಯ ಮೇಲ್ಗಡೆ ತಮಸ್ಸು ರಜಸ್ಸು ಸತ್ವ ಎಂದು ಕ್ರಮವಾಗಿ ತ್ರಿಗುಣಾಭಿಮಾನಿನಿ ಲಕ್ಷ್ಮೀಯನ್ನು, ಇನ್ನೂ ಮೇಲೆ, ಹಾಸಿಗೆಯ ಆಕಾರದಿಂದಿರುವ, ಹೆಡೆಗಳನ್ನು ಛತ್ರದಂತೆ ಹರಡಿರುವ ಶೇಷನನ್ನು ಧ್ಯಾನಿಸಬೇಕು. ಮೇಲೆ ಗುಣತ್ರಯಾಭಿಮಾನಿನಿ ಲಕ್ಷ್ಮೀ ಚಿತ್ರಾಸನರೂಪದಿಂದಿರುತ್ತಾಳೆ ಎಂದು ಚಿಂತಿಸಬೇಕು. ಚಿತ್ರಾಸನದ ಮೇಲೆ ಜೀವ ಸ್ವರೂಪ ಹೃದಯದಲ್ಲಿ ಸ್ವರೂಪಾಂಗುಷ್ಠ ಪರಿಮಿತನೂ ಬಾಹ್ಯ ಹೃದಯದಲ್ಲಿ ಬಾಹ್ಯಾಂಗುಷ್ಠಾ ಪರಿಮಿತನೂ ಆದ ಅಗ್ರೇಶನನ್ನೂ, ಅವನ ಹಿಂಬದಿಯಲ್ಲಿ ಹೃತ್ಕಮಲವ್ಯಾಪಿ ಪ್ರಾದೇಶ ಪರಿಮಿತನಾದ ಪ್ರಾದೇಶನನ್ನೂ, ಕೆಳಗೆ ಕರ್ಣಿಕಾ ಮೂಲದಲ್ಲಿ ಅಂಗುಷ್ಠಾಗ್ರ ಪರಿಮಿತನಾದ ಪ್ರಾದೇಶನನ್ನೂ, ಕೆಳಗೆ ಕರ್ಣಿಕಾ ಮೂಲದಲ್ಲಿ ಅಂಗುಷ್ಠಾಗ್ರ ಪರಿಮಿತನಾದ ಮೂಲೇಶನನ್ನೂ ನಾರಾಯಣಮನಾಮಯಂ' ಎಂದು ಮುಂತಾಗಿ ಮುಂದೆ ಹೇಳುವಂತೆ 'ಲಕ್ಷ್ಮೀಧರಾಭ್ಯಾಮಾಶ್ಲಿಷ್ಟಃ' ಎಂದು ಮುಂತಾದಿ ತಂತ್ರಸಾರದಲ್ಲಿ ಹೇಳಿದ ಆವರಣ ದೇವತೆಗಳೊಂದಿಗೆ ಧ್ಯಾನಿಸಬೇಕು. ಅವನ ವರ್ಣ ಉದಿಸುವ ಸೂರ್ಯನಂತೆ ಅಥವಾ ಮೇಘ ಶ್ಯಾಮವಾಗಿದೆ ಎಂದು ಚಿಂತಿಸಬೇಕು.

ಧ್ಯಾನ ಪ್ರಕಾರ ಹೀಗೆ ಉಕ್ತವಾಗಿದೆ – ಏಕಾಂತವಾದ ಶುಚಿಯಾದಪ್ರದೇಶದಲ್ಲಿ ಜನಜಂಗುಳಿಇಲ್ಲದಲ್ಲಿ ದರ್ಭೆ ಕೃಷ್ಣಾಜಿನ ಮುಂತಾದ ಆಸನದಲ್ಲಿ ಕುಳಿತು ಸ್ವಸ್ಥ ಚಿತ್ತನಾಗಿ ಸ್ಥಿರನಾಗಿ ಶುಚಿಯಾಗಿ ಶರೀರ ತಲೆ ಕತ್ತುಗಳು ಸಮವಾಗಿರುವಂತೆ ಇಟ್ಟು ಕೊಂಡು ಸ್ಥಿರತೆಯಿಂದ ಧ್ಯಾನಮಾಡಬೇಕು. ಆಕಾಲದಲ್ಲಿ ದಿಕ್ಕುಗಳಿಗೆ ಕಣ್ಣದೃಷ್ಟಿ ಹಾಯಿಸಬಾರದು. ತನ್ನ ಮೂಗಿನ ತುದಿಯನ್ನೇ ದಿಟ್ಟಿಸುತ್ತಿರಬೇಕು ಅಷ್ಟಪತ್ರ ಹೃದಯಕಮಲ ಮಧ್ಯದಲ್ಲಿ ಸೂರ್ಯ ಚಂದ್ರ ಅಗ್ನಿಮಂಡಲಗಳ ಮೇಲೆ ಪೀಠವನ್ನು ಅದರ ಮಧ್ಯದಲ್ಲಿರುವ ನಾರಾಯಣನನ್ನು ಚಿಂತಿಸಬೇಕು. ಆತ ನಿರನಿಷ್ಟ ಉದಿಸುವ ಸೂರ್ಯನಂತೆ ಹೊಳೆಯುವವ. ತೇಜಸ್ಸಿನಿಂದ ಸಹಸ್ರ ಅಮಿತ ಸೂರ್ಯರನ್ನೂ ಕೂಡ ಎಂದೂ ಅವನಿಗೆ ಹೋಲಿಸಲಾಗದು. ಸರ್ವದಾ ಆನಂದ ರೂಪ. ಅವನ ಅಂಗಾಲು ಬಹಳ ಕೆಂಪು. ಹೊಳೆಯುವ ನಖಗಳಿಂದ ಅಲಂಕೃತವಾದ ಪಾದ. ಜಂಘೆ ದುಂಡಾಗಿದೆ. ಜಾನು ದುಂಡಾಗಿದೆ. ತೊಡೆಗಳು ಆನೆಯ ಸೊಂಡಿಲಿನಂತಿವೆ. ವಿಶಾಲ ಕಟಿ ಪ್ರದೇಶ. ಒಡ್ಯಾಣದಿಂದಲೂ ಪೀತಾಂಬರ-ದಿಂದಲೂ ಬೆಳಗುತ್ತದೆ. ನಾಭಿ ಆಳವಾಗಿದೆ. ಹೊಟ್ಟೆ ದುಂಡಾಗಿ ತ್ರಿವಳಿಯಿಂದ ಸುಂದರವಾಗಿದೆ. ಎದೆ ವಿಶಾಲವಾಗಿದೆ.

Rarest Archive

ಕತ್ತಿನಲ್ಲಿ ಹೊಳೆಯುವ ಕೌಸ್ತುಭಾಭರಣವಿದೆ. ವನಮಾಲೆಧರಿಸಿದ್ದಾನೆ. ಹಾರ ವೈಜಯಂತಿ ಮುಂತಾದುವನ್ನೂ ಧರಿಸಿದ್ದಾನೆ. ಪುಷ್ಟವಾದ ನೀಳವಾದ ನಾಲ್ಕು ಬಾಹುಗಳಲ್ಲಿ ಶಂಖ ಚಕ್ರಗದಾ ಪದ್ಮಗಳನ್ನು ಧರಿಸಿದ್ದಾನೆ. ಕೆಂಪಾದ ಅರಳಿದ ತಾವರೆಯಂಥ ಕಣ್ಣುಗಳು. ಹೊಳೆವ ಮಕರಕುಂಡಲಗಳು. ಹತ್ತಾರುಸಾವಿರ ಚಂದ್ರರಿಗಿಂತಲೂ ಹೆಚ್ಚು ಕಾಂತಿಯಿಂದ ಬೆಳಗುವ ಮುಖ ಕಮಲ. ಸುಂದರವಾದ ಹುಬ್ಬುಗಳು. ಸುಂದರವಾದ ಹಣೆಯ ಮೇಲೆ ಕಿರೀಟದಿಂದ ಮುಚ್ಚಿದ ಮುಂಗುರುಳುಗಳು. ಇಂಥ ಸ್ವಾಮಿ ಸಕಲ ದುಃಖಗಳನ್ನು ಪರಿಹರಿಸುತ್ತಾನೆ. ನಿತ್ಯಾನಂದಮಯನಾಗಿ ಬೆಳ್ನಗೆನಗುನಗುತ್ತಾನೆ. ಲಕ್ಷ್ಮೀದೇವಿ ಭೂದೇವಿಯರಿಂದ ಆಲಿಂಗಿತನಾಗಿ ಸ್ವಮೂರ್ತಿಗಣ ಮಧ್ಯದಲ್ಲಿ ಕುಳಿತು ಬ್ರಹ್ಮವಾಯು ಶಿವ ಶೇಷ ಗರುಡರಿಂದಲೂ ಇಂದ್ರಾದಿಗಳಿಂದಲೂ ಅಧಿಕಭಕ್ತಿಯಿಂದ ಆರಾಧಿಸಲ್ಪಡುತ್ತಾನೆ. ಸದಾ ಸರ್ವಶಕ್ತನಾಗಿರುತ್ತಾನೆ.'

ಪರಮಾತ್ಮನ ಶರೀರದಲ್ಲಿ ದ್ವಾತ್ರಿಂಶಲ್ಲಕ್ಷಣಗಳನ್ನೂ ಧ್ಯಾನಿಸಬೇಕು. ಭುಜನೇತ್ರ, ಕಪೋಲ, ಜಾನು, ನಖ ಎಂಬ ಐದುಸ್ಥಾನಗಳು ದೀರ್ಘ. ಚರ್ಮ, ತಲೆಕೀದಲು, ಬೆರಳು, ಹಲ್ಲು, ಬೆರಳಗಿಣ್ಣುಗಳು ಇವು ಐದು ಸೂಕ್ಷ್ಮ. ಅಂಗೈ, ಅಂಗಾಲು, ಕಣ್ಣಿನ ತುದಿ, ಕಾಲು, ನಾಲಿಗೆ ಕೆಳತುಟಿ ನಖಗಳು ಏಳು ಕೆಂಪು. ಎದೆ ಹೊಟ್ಟೆ ಮುಂಗುರುಳು ಮುಖ ಹೆಗಲು ಹಣೆಗಳು ಆರು ಉನ್ನತ. ಹಣೆ ಕಟಿ ಎದೆಗಳು ವಿಶಾಲ, ಕತ್ತು ಲಿಂಗ ಜಂಘಗಳು ಸಣ್ಣಗೆ. ಸ್ವರ ಸತ್ವ ನಾಭಿಗಳು ಗಂಭೀರ. ಈ ಮೂವತ್ತೆರಡು ಲಕ್ಷಣಗಳುಳ್ಳವನು ಪರಮಾತ್ಮನೆಂದು ಧ್ಯಾನಿಸಬೇಕು. ಅದನ್ನು ಹೀಗೆ ಹೇಳಿದ್ದಾರೆ ಐದು ದೀರ್ಘ, ಐದು ಸೂಕ್ಷ್ಮ, ಏಳು ಕೆಂಪು ಆರು ಉನ್ನತ, ಮೂರು ವಿಶಾಲ, ಮೂರು ಲಘು, ಮೂರು ಗಂಭೀರ ಇವು ಮೂವತ್ತೆರಡು ಲಕ್ಷಣಗಳು ಎಂದು. ಇಲ್ಲಿ ಲಘು ಎಂದರೆ ಸಣ್ಣಗೆ, ಗಿಡ್ಡ ಎಂದರ್ಥ. ಇವುಗಳ ಜೊತೆಗೆ ಬೇರೆ ಲಕ್ಷಣಗಳನ್ನೂ ಧ್ಯಾನಿಸಬೇಕು. ಬಲಗೈಯಲ್ಲಿ ಸಹಸ್ರಾರ ಚಕ್ರ, ಅಷ್ಟಾಸ್ರಗದೆ, ಶತಾವರ್ತಶಂಖಗಳ ಚಿಹ್ನೆಗಳಿವೆ. ಎಡಗೈಯಲ್ಲಿ ಸಹಸ್ರದಳ ಪದ್ಮದ ಚಿಹ್ನೆ ಅಂಗಾಲುಗಳಲ್ಲಿ ವಜ್ರ ಅಂಕುಶ ಧ್ವಜ ಪದ್ಮರೇಖೆಗಳು. ಹೀಗೆ ಧ್ಯಾನಿಸಬೇಕು.

ಹೃದಯದಲ್ಲಿ ಧ್ಯಾನಿಸಬೇಕಾದ ಭಗವದ್ರೂಪಗಳು ಇವು ಮೂರು – 'ಹೃದಯದಲ್ಲಿ ವ್ಯಾಪ್ತನಾದ ಸರ್ವೇಶನಾದ ಪುರುಷೋತ್ತಮನು ಪ್ರಾದೇಶ. ಅವನು ಜೀವರಿಗೆ ಆಶ್ರಯ ಸ್ಥಾನವೆನಿಸಿದ್ದಾನೆ. ಸರ್ವದೇವಾಶ್ರಯನಾಗಿದ್ದಾನೆ. ಸನಾತನ-ನಾಗಿದ್ದಾನೆ. ಹೃದಯಕಮಲ ಕರ್ಣಿಕಾ ಮೂಲದಲ್ಲಿ ಜೀವಾಂಗುಷ್ಠಾಗ್ರಪ್ರಮಾಣದಿಂದಿರುವವನು ಮೂಲೇಶನಾಮಕ. ಅವನಲ್ಲಿ ಕಾಲಬುಡದ ಜೀವರೆಲ್ಲರೂ ಆಶ್ರಯಿಸಿದ್ದಾರೆ. ಜೀವಾಂಗುಷ್ಠಪ್ರಮಾಣದಿಂದಿರುವವನು ಕರ್ಣಿಕಾಗ್ರದಲ್ಲಿರುವ ಹರಿ. ಅವನಲ್ಲಿ ಜೀವರು ಸುಷುಪ್ತಿ ಕಾಲದಲ್ಲಿ ಪ್ರವೇಶಿಸುತ್ತಾರೆ. ಅವನಿಂದ ಈಚೆಗೆ ಬಂದಾಗ ಎಚ್ಚರಗೊಳ್ಳುತ್ತಾರೆ. ಹೀಗೆ ಮೂರು ರೂಪವುಳ್ಳ ಭಗವಂತನಿಗೆ 'ಹೃದಯ' ಎಂದು ಹೆಸರಿದೆ. ('ಹೃತ್ ಅಯ' ಹೃದಯದಲ್ಲಿರುವವನು, ಎಂಬ ಅರ್ಥದಲ್ಲಿ ಅವನು 'ಹೃದಯ'ನೆನಿಸುತ್ತಾನೆ.)

ಎಷ್ಟುಕಾಲ ಹೃದಯದಲ್ಲಿ ಧ್ಯಾನವಶದಿಂದ ವಾಸನಾಮಯ ಮೂರ್ತಿ ಕಾಣುವುದೋ ಅಷ್ಟುಕಾಲ ಧ್ಯಾನವನ್ನು ಮತ್ತೂ ಮತ್ತೂ ಮಾಡುತ್ತಿರಬೇಕು. ವಾಸನಾಮಯ ಮೂರ್ತಿ ಗೋಚರವಾದಾಗ ಆ ಮೂರ್ತಿ ಭಗವಂತನಿಗೆ ವಾಸನಾಮಯ ಪ್ರತಿಮೆಯಾಗುವುದು. ಆ ಪ್ರತಿಮೆಯಲ್ಲಿ ಭಗವಂತನಿಗೆ ನಿರ್ಮಲವಾದ ನೀರಿನ ಅಭಿಷೇಕ ಗಂಧ ಪುಷ್ಪ ಮುಂತಾದ ಉಪಚಾರಗಳನ್ನು ಮನಸ್ಸಿನಿಂದ ಕಲ್ಪಿಸಿಕೊಂಡು ಪೂಜೆ ಮಾಡಬೇಕು. ಆ ಪ್ರತಿಮಾಂತರ್ಗತನಾದ ವಿಷ್ಣುವನ್ನು ಪೂರ್ಣನಿರ್ದೋಷ, ಪೂರ್ಣ ಜ್ಞಾನಾತ್ಮಕ ಪೂರ್ಣಾನಂದಾತ್ಮಕ, ಪೂರ್ಣಸ್ವಾಮಿ, ಪೂರ್ಣಗುಣ ಎಂದು ಧ್ಯಾನಿಸಬೇಕು.

Rarest Archiver

ಈ ಧ್ಯಾನವನ್ನು ಸ್ವರೂಪವನ್ನು ತಿಳಿದಿರುವ ನಿಯತಗುರುದರ್ಶನವಾಗುವವರೆಗೂ ಮಾಡುತ್ತಿರಬೇಕು. ಬಳಿಕ ಆ ಗುರುಹೇಳುವಂತೆ ಅಪರೋಕ್ಷವಾಗುವವರೆಗೂ ಧ್ಯಾನಮಾಡಬೇಕು. ಧ್ಯಾನಸಮಾಪ್ತಿಯಾದ ಬಳಿಕ ಸಂಪುಟಾಕಾರವಾಗಿ ಮಾತೃಕಾನ್ಯಾಸ ತತ್ವನ್ಯಾಸಗಳನ್ನು ಮಾಡಿ ಧ್ಯಾನಕರ್ಮವನ್ನು ಹರಿಗೆ ಸಮರ್ಪಿಸಬೇಕು.

ಇಲ್ಲಿಗೆ ಶ್ರೀರಾಘವೇಂದ್ರತೀರ್ಥವಿರಚಿತವಾದ ಭಗವದ್ಧ್ಯಾನಪ್ರಕರಣದ
ಕನ್ನಡಾನುವಾದ ಮುಗಿಯಿತು.

॥ ಶ್ರೀಕೃಷ್ಣಾರ್ಪಣಮಸ್ತು ॥

★ ★ ★

Rarest Archives